# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು-560 002

ಸಂಖ್ಯೆ: ಮು.ಆ/ಪಿಆರ್/ (ಲ) 4227 /22-23 ದಿನಾಂಕ: 17.3.23

## ಅಧಿಕಾರ ಪ್ರತ್ಯಾಯೋಜನೆ ಆದೇಶ

(ಬಿಬಿಎಂಪಿ ಕಾಯ್ದೆ 2020ರ ಕಲಂ 66 & 67ರಡಿಯಲ್ಲಿ)

ವಿಷಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಟೆಲಿಕಾಂ ಟವರ್‌ಗಳಿಗೆ ಸಂಬಂಧಿಸಿದಂತೆ ಅನಮತಿ ನೀಡಲು ವಿವಿಧ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡುವ ಬಗ್ಗೆ.

ಉಲ್ಲೇಖ :
1. ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: UDD 75 GEL 2021 (e) ದಿನಾಂಕ: 12-01-2022.
2. Ministry of Communications (Department of Telecommunication) Notification Date: 17-08-2022
3. No. Director Rural -1 DOT, Karnataka LSA Letter No. DDGR1/KTK LSA/1-73/Corr with BBMP /22-23/22 Date: 22-09-2022
4. ಆಯುಕ್ತರು/ಪಿಎಸ್.ಆರ್(ಜ)/785/19-20 ದಿನಾಂಕ: 17-06-2019
5. ಮಾನ್ಯ ಮುಖ್ಯ ಆಯುಕ್ತರಅಧಿಕಾರ ಪ್ರತ್ಯಾಯೋಜನೆ ಆದೇಶ ದಿ: 27.10.2022
6. ಮಾನ್ಯ ಮುಖ್ಯಆಯುಕ್ತರ ಅಧಿಕಾರ ಪ್ರತ್ಯಾಯೋಜನೆ ಆದೇಶ ದಿ: 17-02-2023

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವಟೆಲಿಕಾಂಟವರ್ (ಮೊಬೈಲ್ ಟವರ್, ಟೆಲಿಕಾಂ ಪೋಲ್/ ಸ್ಮಾಲ್ ಸೇಲ್/ ಸ್ಟ್ರೀಟ್ ಪರ್ನಿಚರ್/ ಟೆಲಿಗ್ರಾಪ್ ಲೈನ್)ಗಳಿಗೆ ಅನುಮತಿ ನೀಡಲು ಕರ್ನಾಟಕ ರಾಜ್ಯ ಸರ್ಕಾರವು ಉಲ್ಲೇಖ (1) ರ ರಾಜ್ಯ ಸರ್ಕಾರದ ಅಧಿಸೂಚನೆ ಪತ್ರದಲ್ಲಿ ನಿಯಮ / ಉಪ ವಿಧಿಯನ್ನು ರೂಪಿಸಲಾಗಿರುತ್ತದೆ. ಉಲ್ಲೇಖ (1) ರ ಅಧಿಸೂಚನೆಯಲ್ಲಿ ರೂಪಿಸಿರುವ ನಿಯಮ / ಉಪವಿಧಿರಂತೆ ಸಕ್ಷಮ ಪ್ರಾಧಿಕಾರವಾದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಟೆಲಿಕಾಂಟವರ್ ಇನ್ಫ್ರಾಸ್ಟ್ರಕ್ಚರ್ (ಮೊಬೈಲ್‌ಟವರ್, ಟೆಲಿಕಾಂ ಪೋಲ್/ ಸ್ಮಾಲ್ ಸೇಲ್/ ಸ್ಟ್ರೀಟ್ ಪರ್ನಿಚರ್/ ಟೆಲಿಗ್ರಾಪ್ ಲೈನ್) ಗಳ ಸ್ಥಾಪನೆಗೆ ಅನುಮತಿಯನ್ನು ನೀಡಬೇಕಾಗಿರುತ್ತದೆ. ಹಾಗಾಗಿ ಪಾಲಿಕೆಯ ವ್ಯಾಪ್ತಿಯಲ್ಲಿ ಉಲ್ಲೇಖಿತ ನಿಯಮ /ಉಪವಿಧಿರನ್ವಯ ಅನುಮತಿ ಕೋರಿ ಅಂತರ್ಜಾಲ ತಂತ್ರಾಂಶದಲ್ಲಿ ಸಲ್ಲಿಸಲಾಗುವ ಪ್ರಸ್ತಾವನೆಗಳಿಗೆ ಸಂಬಂದಿಸಿದಂತೆ ಕಾರ್ಯನಿರ್ವಹಿಸಲು ಪಾಲಿಕೆಯ ವಿವಿಧ ಅಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆಯನ್ನು ಮಾಡಿ ಉಲ್ಲೇಖ (5 & 6) ರಲ್ಲಿ ಆದೇಶವನ್ನು ಹೊರಡಿಸಲಾಗಿತ್ತು.

ಪಾಲಿಕೆಯ ಕೆಲಸ ಕಾರ್ಯಗಳ ನಿರ್ವಹಣೆ ದೃಷ್ಟಿಯಿಂದ ಮೊಬೈಲ್ ಟವರ್‌ಗಳಿಗೆ ಅನುಮತಿ ನೀಡುವ ಕಾರ್ಯವಿಧಾನವನ್ನು ವಲಯ ವ್ಯಾಪ್ತಿಗೆ ನೀಡಲು ತೀರ್ಮಾನಿಸಿ ಮೊಬೈಲ್ ಟವರ್‌ಗಳಿಗೆ ಸಂಬಂಧಿಸಿದಂತೆ ಉಲ್ಲೇಖ (6) ರಂತೆ ಹೊರಡಿಸಲಾಗಿದ್ದ ಅಧಿಕಾರ ಪ್ರತ್ಯಾಯೋಜನ ಆದೇಶದಲ್ಲಿ ಕೆಲವು ಮಾರ್ಪಾಡುಗಳನ್ನು ಅಳವಡಿಸಿ, ಅನುಮತಿ ನೀಡಲು ಕಾಲಾವಧಿಯನ್ನು ನಿಗಧಿಪಡಿಸಿ, ಉಲ್ಲೇಖ 1ರ ಅಧಿಸೂಚನೆ ನಿಯಮ-2(ಜಿ)(i)ರಲ್ಲಿ ನೋಡಲ್ ಅಧಿಕಾರಿಗಳನ್ನು ನೇಮಿಸಲು ನೀಡಿರುವ ಅವಕಾಶ ಹಾಗೂ ಟೆಲಿಕಾಂ ಟವರ್ ಇನ್ಫ್ರಾಸ್ಟ್ರಕ್ಚರ್ ಅನುಮತಿ ನೀಡಲು ಉಲ್ಲೇಖ 2 ರ ಅಧಿಸೂಚನೆಯನ್ವಯ ನೀಡಿರುವ ಅವಕಾಶದನ್ವಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ 2020ರ ಸೆಕ್ಷನ್ 66 & 67ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಪಾಲಿಕೆಯ ವಲಯ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಅಧಿಕಾರಿಗಳಿಗೆ ಈ ಕೆಳಕಂಡಂತೆ ಅಧಿಕಾರ ಪ್ರತ್ಯಾಯೋಜಸಿ ಆದೇಶಿಸಿದೆ.

EE(OFC) circulate to file. 28/3/23

CHIEF ENGINEER OFC CELL, Bruhat Bengaluru Mahanagra Palike — BBMP No. 405 Date 28/03/23

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| ಕ್ರ ಸಂ | ಮೊಬೈಲ್ ಟವರ್‌ಗಳಿಗೆ ಸಂಬಂಧಿಸಿದಂತೆ ಅನುಮತಿ ನೀಡಲು ವಿವಿಧ ಅಧಿಕಾರಿಗಳ ಕರ್ತವ್ಯಗಳು | | ಅನುಮತಿ ನೀಡಲು ವಿಧಿಸಿರುವ ಕಾಲಾವಧಿ (ಕಾರ್ಯ ನಿರ್ವಹಣ ದಿನಗಳು) | |
|---|---|---|---|---|
| | | | ಹಾಲಿ ಅಳವಡಿಸಿರುವ ಟವರ್‌ಗಳಿಗೆ | ಹೊಸದಾಗಿ ಅಳವಡಿಸುವ ಟವರ್‌ಗಳಿಗೆ |
| 1 | ವಾರ್ಡ್ ಹಂತದ ಸಹಾಯಕ / ಕಿರಿಯ ಅಭಿಯಂತರರು | ಹಾಲಿ ಅಳವಡಿಸಿರುವ ಮೊಬೈಲ್ ಟವರ್‌ಗಳ ನೊಂದಣಿ ಹಾಗೂ ಹೊಸದಾಗಿ ಅಳವಡಿಸುವ ಮೊಬೈಲ್ ಟವರ್ ಅನುಮತಿ ಸಂಬಂದಿಸಿದಂತೆ ಆನ್‌ಲೈನ್‌ನಲ್ಲಿ ಸ್ವೀಕೃತವಾದ ಅರ್ಜಿಗಳನ್ನು ವಿವಿದ ಬಫರ್‌ಗಳ ಪರಿಶೀಲನೆಗಾಗಿ KSRSACಗೆ ಕಳುಹಿಸುವುದು | 1 | 1 |
| | | • ಹಾಲಿ ಅಳವಡಿಸಿರುವ ಮೊಬೈಲ್ ಟವರ್‌ಗಳ ನೊಂದಣಿಗೆ ಸಂಬಂಧಿಸಿದಂತೆ KSRSAC ನಿಂದ ಪರಿಶೀಲನೆಯಾಗಿ ಸ್ವೀಕೃತವಾಗುವ ಅರ್ಜಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಹಾಗೂ KSRSAC ವರದಿಯನ್ನು ಪರಿಶೀಲಿಸಿಕೊಂಡು ಅನುಮೋದನೆ ನೀಡುವ ಬಗ್ಗೆ/ ನಿರಾಕರಿಸುವ ಬಗ್ಗೆ ಸೂಕ್ತ ಶಿಫಾರಸ್ಸಿನೊಂದಿಗೆ ವಲಯ ಸಹಾಯಕ ನಿರ್ದೇಶಕರು ನಗರಯೋಜನೆರವರಿಗೆ ಕಳುಹಿಸುವುದು. | 2 | – |
| | | • ಹೊಸದಾಗಿ ಅಳವಡಿಸುವ ಮೊಬೈಲ್ ಟವರ್‌ಗಳ ಅನುಮತಿ ನೀಡುವ ಸಂಬಂಧಿಸಿದಂತೆ KSRSAC ನಿಂದ ಪರಿಶೀಲನೆಯಾಗಿ ಸ್ವೀಕೃತವಾಗುವ ಅರ್ಜಿಗಳಿಗೆ, ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಗೂ KSRSAC ವರದಿಯನ್ನು ಪರಿಶೀಲಿಸಿಕೊಂಡು ವಾರ್ಡ್ ಕಮಿಟಿಯ ಗಮನಕ್ಕೆ ತಂದು ಅನುಮೋದನೆ ನೀಡುವ ಬಗ್ಗೆ/ ನಿರಾಕರಿಸುವ ಬಗ್ಗೆ ಸೂಕ್ತ ಶಿಫಾರಸ್ಸಿನೊಂದಿಗೆ ವಲಯ ಸಹಾಯಕ ನಿರ್ದೇಶಕರು ನಗರ ಯೋಜನೆರವರಿಗೆ ಕಳುಹಿಸುವುದು. | – | 5 |
| 2 | ಸಹಾಯಕ ನಿರ್ದೇಶಕರು (ನಗರಯೋಜನೆ ವಲಯ) | ಹಾಲಿ ಅಳವಡಿಸಿರುವ ಮೊಬೈಲ್ ಟವರ್‌ಗಳ ನೊಂದಣಿ / ಹೊಸದಾಗಿ ಅಳವಡಿಸುವ ಮೊಬೈಲ್ ಟವರ್‌ಗಳ ಅನುಮತಿಗೆ ಸಂಬಂಧಿಸಿದಂತೆ ವಾರ್ಡ್ ಹಂತದ ಸಹಾಯಕ / ಕಿರಿಯ ಅಭಿಯಂತರರು ಸಲ್ಲಿಸಿದ ವರದಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿಕೊಂಡು ಅನುಮೋದನೆ ನೀಡುವ ಬಗ್ಗೆ/ ನಿರಾಕರಿಸುವ ಬಗ್ಗೆ ಸೂಕ್ತ ಶಿಫಾರಸ್ಸಿನೊಂದಿಗೆ ಜಂಟಿ ಆಯುಕ್ತರಿಗೆ ಸಲ್ಲಿಸುವುದು. | 5 | 5 |
| | | ಜಂಟಿ ಆಯುಕ್ತರಿಂದ ಅನುಮೋದನೆಗೊಂಡ ಪ್ರಸ್ತಾವನೆಗಳಿಗೆ ಶುಲ್ಕ ಪಾವತಿ ತಿಳುವಳಿಕೆ ಪತ್ರ ನೀಡುವುದು | 1 | 1 |
| | | ಶುಲ್ಕಗಳನ್ನು ಪಾವತಿಸಿದ ನಂತರ ಅನುಮತಿ ಪತ್ರವನ್ನು ನೀಡುವುದು. | 1 | 1 |

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

| | | | | |
|---|---|---|---|---|
| 3 | ಜಂಟಿ ಆಯುಕ್ತರು (ವಲಯ) | ಹಾಲಿ ಅಳವಡಿಸಿರುವ ಮೊಬೈಲ್ ಟವರ್‌ಗಳ ನೊಂದಣಿ / ಹೊಸದಾಗಿ ಅಳವಡಿಸುವ ಮೊಬೈಲ್ ಟವರ್‌ಗಳ ಅನುಮತಿಗೆ ಸಂಬಂಧಿಸಿದಂತೆ ಸಹಾಯಕ ನಿರ್ದೇಶಕರು (ನಗರಯೋಜನೆ) ರವರು ಸಲ್ಲಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅನುಮೋದನೆ/ ನಿರಾಕರಿಸುವ ಬಗ್ಗೆಸೂಕ್ತ ತೀರ್ಮಾನ ಕೈಗೊಳ್ಳುವುದು. (ಹೊಸದಾಗಿ ಅಳವಡಿಸುವ ಟವರ್‌ಗಳಿಗೆ ಸಂಬಂಧಿಸಿದಂತೆ ವಾರ್ಡ್‌ಕಮಿಟಿಯ ನಿರ್ಣಯವನ್ನು ಪರಾಮರ್ಶಿಸಿ ಅನುಮತಿ ನೀಡುವ / ನಿರಾಕರಿಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವುದು) | 5 | 5 |
| | | | 15 | 18 |
| 4 | ನಿರ್ದೇಶಕರು,/ ಡಿ.ಸಿ.ಐ.ಓ ಬಿಬಿಎಂಪಿ ಐಟಿ ವಿಭಾಗ | ಟೆಲಿಕಾಂ ಟವರ್ ಇನ್‌ಫ್ರಾಸ್ಟಕ್ಚರ್‌ಗೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದಲ್ಲಿ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದು ಹಾಗೂ ಅಧಿಕಾರಿಗಳಿಗೆ ತಂತ್ರಾಂಶದ ಉಪಯೋಗದ ಬಗ್ಗೆ ತರಬೇತಿಯನ್ನು ನೀಡುವುದು.<br><br>ಜಂಟಿ ಆಯುಕ್ತರು (ಯಲಹಂಕ) ವ್ಯಾಪ್ತಿಯ ವಲಯ ನಗರ ಯೋಜನಾ ವಿಭಾಗದಿಂದ ತಂತ್ರಾಂಶದ ಅಭಿವೃದ್ಧಿಗೆ ಸಂಬಂಧಿಸಿದಂತೆ ಐ.ಟಿ ವಿಭಾಗಕ್ಕೆ ಅಗತ್ಯ ತಾಂತ್ರಿಕ ಸಲಹೆ / ಸಹಕಾರವನ್ನು ನೀಡುವುದು ಹಾಗೂ ಈ ಸಂಬಂಧ ಸಭೆಗಳಿಗೆ ಮಾಹಿತಿ ನೀಡುವುದು. | | |

- ಉಲ್ಲೇಖ (1)ರ ಅಧಿಸೂಚನೆಯಲ್ಲಿರುವ ನಿಯಮಗಳ ಪ್ರಕಾರ ಪರಿಶೀಲಿಸಿಕೊಂಡು ಈಗಾಗಲೇ ಅಳವಡಿಸಿರುವ / ಹೊಸದಾಗಿ ಅಳವಡಿಸುವ ಟೆಲಿಕಾಂ ಟವರ್‌ಗಳಿಗೆ ನೊಂದಣಿ/ಅನುಮತಿಯನ್ನು ನೀಡಲು ಕ್ರಮವಹಿಸುವುದು.
- ಪರಿಷ್ಕೃತ ಮಹಾಯೋಜನೆ ಮತ್ತು ವಲಯ ನಿಯಮಾವಳಿ – 2015 ಯನ್ನು ಪರಿಶೀಲಿಸಿಕೊಂಡು ಅನುಮತಿ ನೀಡಲು ಕ್ರಮವಹಿಸುವುದು.
- ದಿನಾಂಕ: 10.10.2022ರ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಹಾಗೂ ದಿನಾಂಕ: 06.12.2020ರ ಅಪರ ಮುಖ್ಯ ಕಾರ್ಯದರ್ಶಿಗಳು (ಎಲೆಕ್ಟ್ರಾನಿಕ್ಸ್ ಐಟಿ/ಬಿಟಿ) ರವರುಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಯ ಅಂಶಗಳಂತೆ ಕ್ರಮ ಕೈಗೊಳ್ಳುವುದು.
- ಸರ್ಕಾರದ / ಬಿಬಿಎಂಪಿ ಜಾಗದಲ್ಲಿ ಟೆಲಿಕಾಂ ಟವರ್‌ಗಳಿಗೆ ಅನುಮತಿ ಕೋರಿದ್ದಲ್ಲಿ ಉಲ್ಲೇಖ (1) ರ ಅಧಿಸೂಚನೆಯ ನಿಯಮ 15(2) ರಂತೆ ಶುಲ್ಕಗಳನ್ನು ಸಂಗ್ರಹಿಸಿಕೊಂಡು ಅನುಮತಿ ನೀಡಲು ಕ್ರಮವಹಿಸುವುದು.
- ವಾರ್ಡ್ ಕಮಿಟಿಯ ಸಭಾ ನಡಾವಳಿಯಂತೆ ಕ್ರಮಕೈಗೊಳ್ಳುವುದು.
- ಮೇಲ್ಕಂಡ ಕೋಷ್ಟಕದನ್ವಯ ಅಧಿಕಾರ ಪ್ರತ್ಯಾಯೋಜಿತ ಅಧಿಕಾರಿಗಳು ಅಂತರ್ಜಾಲ ತಂತ್ರಾಂಶವಲ್ಲಿ ಟೆಲಿಕಾಂ ಟವರ್ ಇನ್ಫ್ರಾಸ್ಟ್ರಕ್ಚರ್ ಅನುಮತಿ ಕೋರುವ ಪ್ರಸ್ತಾವನೆಗಳನ್ನು ತ್ವರಿತವಾಗಿ ನಿಯಮಾನುಸಾರ ವಿಲೇವಾರಿ ಮಾಡಲು ಕ್ರಮವಹಿಸುವುದು.
- ಟೆಲಿಕಾಂ ಟವರ್ ಇನ್ಫ್ರಾಸ್ಟ್ರಕ್ಚರ್ ಅನುಮತಿಗೆ ಸಂಬಂದಿಸಿದ ಅಧಿಕಾರ ಪ್ರತ್ಯಾಯೋಜನೆ ನೋಡಲ್ ಅಧಿಕಾರಿಗಳು ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ಮೇಲುಸ್ತುವಾರಿ ವಹಿಸುವುದು.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಗಳನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಕರ್ನಾಟಕ ರಾಜ್ಯ ಸರ್ಕಾರರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.

2. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಶಾಖೆಗೆ ಕಳುಹಿಸಿದೆ.
3. ವಿಶೇಷ ಆಯುಕ್ತರು (ಯೋಜನೆಗಳು / ಹಣಕಾಸು/ ಕಂದಾಯ/ ಮಾಹಿತಿ ತಂತ್ರಜ್ಞಾನ) ರವರ ಮಾಹಿತಿಗಾಗಿ.
4. ವಲಯ ಆಯುಕ್ತರು (ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿ ನಗರ / ಪಶ್ಚಿಮ/ ದಕ್ಷಿಣ / ಬೊಮ್ಮನಹಳ್ಳಿ ವಲಯ ವಲಯ) ರವರುಗಳ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
5. ನಿರ್ದೇಶಕರು ಐಟಿ ವಿಭಾಗ ಬಿಬಿಎಂಪಿ ರವರು ಟೆಲಿಕಾಂ ಟವರ್ ಇನ್ಫ್ರಾಸ್ಟ್ರಕ್ಚರ್ (ಮೊಬೈಲ್ ಟವರ್, ಟೆಲಿಕಾಂ ಪೋಲ್/ ಸ್ಮಾಲ್ ಸೇಲ್/ ಸ್ಟ್ರೀಟ್ ಪರ್ನಿಚರ್/ ಟೆಲಿಗ್ರಾಫ್ ಲೈನ್)ಗಳ ಅನುಮತಿ ನೀಡಲು ಅಂತರ್ಜಾಲ ತಂತ್ರಾಂಶದ ಮುಖಾಂತರ ವಿದ್ಯುನ್ಮಾನ ವೇದಿಕೆ ಕಲ್ಪಿಸಲು ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಸಂಬಂದಿಸಿದ ವಿಭಾಗಕ್ಕೆ ಹಸ್ತಾಂತರಿಸುವುದು ಹಾಗೂ ತಂತ್ರಾಂಶವು ಸುಗಮವಾಗಿ ಕಾರ್ಯನಿರ್ವಹಿಸುವಂತೆ ನಿರಂತರವಾಗಿ ನಿರ್ವಹಿಸುವುದು
6. ಪ್ರಧಾನ ಅಭಿಯಂತರರುರವರ ಮಾಹಿತಿಗಾಗಿ
7. ಅಪರ / ಜಂಟಿ ಆಯುಕ್ತರು (ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿ ನಗರ / ಪಶ್ಚಿಮ/ ದಕ್ಷಿಣ / ಬೊಮ್ಮನಹಳ್ಳಿ ವಲಯ ವಲಯ) ರವರುಗಳ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
8. ಮುಖ್ಯ ನಗರ ಯೋಜಕರು (ನಗರಯೋಜನೆ) ರವರ ಮಾಹಿತಿಗಾಗಿ
9. ಮುಖ್ಯ ಲೆಕ್ಕಾಧಿಕಾರಿಗಳು ಕೇಂದ್ರರವರ ಮಾಹಿತಿಗಾಗಿ ಕಳುಹಿಸಿದೆ.
10. ವಲಯ ಮುಖ್ಯ ಅಭಿಯಂತರರು (ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿ ನಗರ / ಪಶ್ಚಿಮ/ ದಕ್ಷಿಣ / ಬೊಮ್ಮನಹಳ್ಳಿ ವಲಯ ವಲಯ) ರವರುಗಳ ಮುಂದಿನ ಅಗತ್ಯಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
11. ಅಪರ ನಿರ್ದೇಶಕರು (ನಗರಯೋಜನೆ) ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
12. ಮುಖ್ಯ ಅಭಿಯಂತರರು (ಓ.ಎಫ್.ಸಿ) ರವರ ವಿಭಾಗಕ್ಕೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ
13. ಮುಖ್ಯಸ್ಥರು, ಕಾನೂನು ಕೋಶ ರವರ ಮಾಹಿತಿಗಾಗಿ
14. ಜಂಟಿ ನಿರ್ದೇಶಕರು (ನಗರ ಯೋಜನೆ), (ಉತ್ತರ, ದಕ್ಷಿಣ) ರವರ ಮುಂದಿನ ಸೂಕ್ತ ಕ್ರಮಕ್ಕಾಗಿ
15. ಎಲ್ಲಾ ವಲಯದ ಸಹಾಯಕ ನಿರ್ದೇಶಕರುಗಳು ನಗರಯೋಜನೆ (ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿ ನಗರ / ಪಶ್ಚಿಮ/ ದಕ್ಷಿಣ / ಬೊಮ್ಮನಹಳ್ಳಿ ವಲಯ ವಲಯ) ರವರ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ
16. ಎಲ್ಲಾ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಮಹದೇವಪುರ / ಯಲಹಂಕ / ದಾಸರಹಳ್ಳಿ / ರಾಜರಾಜೇಶ್ವರಿ ನಗರ / ಪಶ್ಚಿಮ/ ದಕ್ಷಿಣ / ಬೊಮ್ಮನಹಳ್ಳಿ ವಲಯ ವಲಯ) ರವರ ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.
17. ಕಛೇರಿ ಪ್ರತಿ.